# ಗೌರೀಮಾ

ಪಿ. ಉಷಾ

ಶ್ರೀರಾಮಕೃಷ್ಣರ ಮಹಿಳಾ ಭಕ್ತೆಯರಲ್ಲಿ ಗೌರೀಮಾ ಎಂಬುವಳ ವ್ಯಕ್ತಿತ್ವ ತುಂಬ ವಿಶಿಷ್ಟವಾದುದು. ಆಕೆಯ ಜೀವನದ ಕಿರು ಪರಿಚಯ ನೀಡಿರುವ ಪಿ.ಉಷಾ ಅವರು ಬೆಂಗಳೂರು ಶ್ರೀರಾಮಕೃಷ್ಣ ಮಠದ ನಿಕಟ ಭಕ್ತರು.

"ಮಹಿಳೆಯರೇಕೆ ಆಭರಣಗಳನ್ನು ತೊಡುವರು? ಅವುಗಳನ್ನು ಧರಿಸದಿದ್ದರೆ ನನಗಾಗುವ ನಷ್ಟವಾದರೂ ಏನು?" ಪುಟ್ಟ ಹೆಣ್ಣು ಮಗುವೊಂದರ ಯೋಚನಾಲಹರಿ ಹೀಗೆ ಸಾಗಿತ್ತು. ಬಳಿಕ ತಾನು ಕೈಯಲ್ಲಿ ತೊಟ್ಟಿದ್ದ ಬಂಗಾರದ ಬಳೆಯನ್ನು ತೆಗೆದು ಅದನ್ನು ಕಚ್ಚಿದಳು. ಅಯ್ಯೋ! ಅದು ರುಚಿಯಾಗಿಯೂ ಇರಲಿಲ್ಲ! ತಕ್ಷಣವೇ ಸಮೀಪದಲ್ಲಿ ಹರಿಯುತ್ತಿದ್ದ ಗಂಗೆಗೆ ಅದನ್ನು ಎಸೆದುಬಿಟ್ಟಳು. ಎಳೆತನದಲ್ಲೇ ಕಾಂಚನದ ಮೇಲೆ ಅಸಾಮಾನ್ಯ ವೈರಾಗ್ಯವನ್ನು ತಳೆದಿದ್ದ ಈ ಪುಟ್ಟ ಬಾಲೆಯ ಹೆಸರು ಮೃಡಾನಿ. ರುದ್ರಾಣಿ ಎಂದು ಸಹ ಅವಳನ್ನು ಕರೆಯುತ್ತಿದ್ದರು. ಈಕೆಯನ್ನು ಕುರಿತು ಜ್ಯೋತಿಷಿಯೊಬ್ಬನು "ಈ ಹುಡುಗಿ ಮುಂದೆ ಒಬ್ಬ ಯೋಗಿನಿಯಾಗುವಳು" ಎಂದು ಹೇಳಿದ್ದು ದಿಟವಾಯಿತು. ಸುವರ್ಣಕಾಂತಿಯಂದೊಡಗೂಡಿ ಶಿವಪತ್ನಿ ಗೌರಿಯಂತೆ ಕಂಗೊಳಿಸುತ್ತಿದ್ದ ಮೃಡಾನಿಯು ಮುಂದೆ "ಗೌರಿ-ಮಾ" ಎಂದೇ ಪರಿಚಿತಳಾದಳು.

೧೮೫೭ರಲ್ಲಿ ಕಲ್ಕತ್ತೆಯ ಸಿರಿವಂತ ಕುಟುಂಬವೊಂದರಲ್ಲಿ ಜನಿಸಿದ್ದ ಇವಳು ಬಾಲ್ಯದಲ್ಲಿ ಕ್ರೈಸ್ತ ಹಾಗೂ ಹಿಂದೂ ಶಾಲೆಗಳಲ್ಲಿ ಒಳ್ಳೆಯ ವಿದ್ಯಾಭ್ಯಾಸವನ್ನೇ ಪಡೆದಳು. ಸಂಸ್ಕೃತವ್ಯಾಕರಣ, ಭಗವದ್ಗೀತೆ, ರಾಮಾಯಣ, ಮಹಾಭಾರತ ಶ್ಲೋಕಗಳನ್ನು ಮನದಟ್ಟು ಮಾಡಿಕೊಂಡಿದ್ದಳು. ತನ್ನ ವಯಸ್ಸಿನ ಇತರ ಮಕ್ಕಳಿಗಿಂತ ಬಹಳವೇ ಭಿನ್ನಳಾಗಿದ್ದ ಮೃಡಾನಿಗೆ ಭಗವಂತನಲ್ಲಿದ್ದ ಶ್ರದ್ಧೆ ಅಪಾರ. ಬಡಬಗ್ಗರು, ಅಸಹಾಯಕರೆಂದರೆ ಅತೀವ ಕರುಣೆ. ಒಳ್ಳೆಯ ಭೋಜನ, ವಸ್ತ್ರಾಭರಣಗಳ ಮೇಲೆ ಅವಳಿಗಿದ್ದ ಆಸಕ್ತಿ ಅಷ್ಟಕ್ಕಷ್ಟೆ. ಭಗವತ್ಪ್ರಸಂಗಗಳಲ್ಲಿ ಅತ್ಯಾಸಕ್ತಿ. ಹಿಮಾಲಯದ ತೀರ್ಥಸ್ಥಳಗಳ ಬಗ್ಗೆ ಕೇಳಿದಾಗಲೆಲ್ಲ ಅಲ್ಲಿಗೆ ತಾನೂ ಹೋಗಲೇಬೇಕೆಂಬ ತವಕ.

ಹೀಗಿರುವಾಗ ಒಮ್ಮೆ ಬೃಂದಾವನದಿಂದ ಬಂದಿದ್ದ ಸಾಧ್ವಿಯೊಬ್ಬಳು ತನ್ನ ಬಳಿಯಲ್ಲಿದ್ದ ದಾಮೋದರ ಶಿಲೆಯನ್ನು ಅವಳ ಕೈಯಲ್ಲಿರಿಸುತ್ತ, "ನೋಡಮ್ಮ, ಭಗವಂತನ ಈ ಪ್ರತಿಮೆಯು ನನ್ನ ಸರ್ವಸ್ವ. ಈ ದೇವರಿಗೆ ನಿನ್ನ ಮೇಲೆ ತುಂಬಾ ಪ್ರೀತಿಯುಂಟಾಗಿರುವುದರಿಂದ ನಿನಗಿದನ್ನು ಕೊಡುತ್ತಿರುವೆ. ಇದನ್ನು ಪೂಜಿಸು. ನಿನಗೆ ಒಳ್ಳೆಯದಾಗಲಿ" ಎಂದು ಹರಸಿ ಹೊರಟುಹೋದಳು. ಪ್ರತಿಮೆಯನ್ನು ಸ್ವೀಕರಿಸಿದ ಹುಡುಗಿ ಆ ಭಗವಂತನನ್ನೇ ತನ್ನ ಪತಿಯೆಂದು ತಿಳಿದು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಆತನ ಸೇವೆಯನ್ನು ಮಾಡತೊಡಗಿದಳು.



ಮೃಡಾನಿಯು ಸಂಸಾರದಲ್ಲಿ ತೋರುತ್ತಿದ್ದ ಅನಾಸಕ್ತಿಯನ್ನು ಗಮನಿಸಿದ ನೆಂಟರಿಷ್ಟರಿಗೆ ಅವಳನ್ನು ಪ್ರಾಪಂಚಿಕತೆಯೆಡೆಗೆ ಸೆಳೆಯಲು ಹೊಳೆದದ್ದು ಒಂದೇ ಉಪಾಯ—ವಿವಾಹ! ಆದರೆ ಅವಳಾದರೋ ಭಗವಾನ್ ವಿಷ್ಣುವನ್ನೇ ತನ್ನ ಪತಿಯಾಗಿ ಸ್ವೀಕರಿಸಿದ್ದಳಲ್ಲ? ಈಗ ಅವಳಿಗುಂಟಾದ ಖೇದ, ಕೋಪಗಳೆಷ್ಟೆಂದು ಹೇಳತೀರದು. ಆದರೂ ಅವಳು ಅದೃಷ್ಟವಂತಳೆ. ಏಕೆಂದರೆ, ತನ್ನ ಮಗಳ ಅಂತರಾಳವನ್ನರಿತ ಅವಳ ತಾಯಿ, "ಮಗಳೇ, ನಿನ್ನ ವೈರಾಗ್ಯ ಇಷ್ಟೊಂದು ತೀವ್ರವಾಗಿರುವಾಗ 'ಮದುವೆಯಾಗು' ಎಂದು ನಿನ್ನನ್ನು ನಾನು ಒತ್ತಾಯಿಸಲಾರೆ. ಇಗೊ, ನಿನ್ನನ್ನು ಭಗವಂತನಿಗೆ ಸಮರ್ಪಿಸುವೆ. ಆತನು ನಿನ್ನನ್ನು ಎಂದೆಂದೂ ರಕ್ಷಿಸಲಿ" ಎಂದು ಆಶೀರ್ವದಿಸಿದಳು.

ಸಂನ್ಯಾಸಿನಿಯಾಗಿ ಪರಿವ್ರಾಜಕ ಜೀವನವನ್ನು ನಡೆಸಬೇಕೆಂಬುದು ಮೃಡಾನಿಯ ಇಚ್ಛೆಯಾಗಿತ್ತಾದರೂ ಆಗಿನ ಕಾಲದಲ್ಲಿ ಹುಡುಗಿಯರಿಗೆ ಅದೇನೂ ಸುಲಭವಾಗಿರಲಿಲ್ಲ. ಆದರೂ ನಮ್ಮಲ್ಲಿ ವ್ಯಾಕುಲತೆಯಿದ್ದರೆ ಭಗವಂತನ ಕೃಪೆಯಾಗುವುದು ಖಂಡಿತ. ತಾಯಿ-ತಂದೆ, ನೆಂಟರಿಷ್ಟರನ್ನು ತೊರೆಯುವ ಧೈರ್ಯ ಹಾಗೂ ಸುಸಂದರ್ಭಗಳು ಅವಳಿಗೆ ಒದಗಿಯೇ ಒದಗಿದುವು. ಸಂನ್ಯಾಸಿನಿ ಉಡುಪನ್ನು ಧರಿಸಿ ವೈರಾಗಿಗಳ ಗುಂಪೊಂದನ್ನು ಸೇರಿ ಪರಿವ್ರಾಜಕಳಾಗಿ ಹೊರಟೇಬಿಟ್ಟಳು. ಹರಿದ್ವಾರ, ಹೃಷೀಕೇಶಗಳಲ್ಲಿ ಅನೇಕ ಸಾಧು ಸಂನ್ಯಾಸಿಗಳು ತಪಸ್ಸಿನಲ್ಲಿ ತೊಡಗಿರುವುದನ್ನು ಕಂಡು ಉತ್ತೇಜಿತಳಾದಳು. ಭವ್ಯ ಹಿಮಾಲಯ ಹಾಗೂ ಶಾಂತ ಸಲಿಲ ಗಂಗೆಯ ಮನೋಹರ ದೃಶ್ಯಗಳು ಭಗವತ್ಸಾಕ್ಷಾತ್ಕಾರದಲ್ಲಿ ಅವಳಿಗಿದ್ದ ವ್ಯಾಕುಲತೆಯನ್ನು ಮತ್ತಷ್ಟು ಪ್ರಬಲಗೊಳಿಸಿದವು. ಹಿಮಾಲಯದಲ್ಲಿನ ಅನೇಕ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡುವಾಗ ತನ್ನನ್ನು ಯಾರೂ ಗುರುತಿಸದಿರಲೆಂದು ತಲೆಗೂದಲನ್ನು ಕತ್ತರಿಸಿ, ಕಾವಿಯನ್ನುಟ್ಟಳು. ಒಮ್ಮೊಮ್ಮೆ ಉದ್ದನೆಯ ನಿಲುವಂಗಿಯನ್ನು ತೊಟ್ಟು ಪುರುಷರಂತೆ ತಲೆಗೆ ಪೇಟವನ್ನು ಸುತ್ತಿಕೊಳ್ಳುತ್ತಿದ್ದಳು. ಅತ್ಯಂತ ರೂಪವತಿಯಾಗಿದ್ದರಿಂದ ಅವಳು ಮೈಗೆಲ್ಲ ಬೂದಿ ಕೊಳೆ ಬಳಿದುಕೊಂಡು, ಯಾರೂ ಹತ್ತಿರ

ಸುಳಿಯಬಾರದೆಂದು ಹುಚ್ಚಿಯಂತೆ ನಟಿಸುತ್ತಿದ್ದುದೂ ಉಂಟು. ಹೆಚ್ಚಿನ ಸಮಯ ಮೌನವನ್ನಾಚರಿಸುತ್ತಿದ್ದು, ಯಾರಾದರೂ ಆಕೆಯನ್ನು ಯಾರೆಂದು ಕೇಳಿದರೆ, ತಾನು ವಿವಾಹಿತೆಯೆಂದೂ, ತನ್ನ ಪತಿಯೊಂದಿಗೆ ವಾಸಿಸುತ್ತಿರುವುದಾಗಿಯೂ ಹೇಳುತ್ತಿದ್ದಳು. ಇದೇನೂ ಸುಳ್ಳುಮಾತಾಗಿರಲಿಲ್ಲ; ಭಗವಾನ್ ವಿಷ್ಣುವನ್ನೇ ಪತಿಯೆಂದು ಸ್ವೀಕರಿಸಿದ್ದಳಲ್ಲ! ಮತ್ತೆ ಆತನು ಸದಾ ಅವಳ ಬಳಿಯಲ್ಲೇ ಇರುತ್ತಿದ್ದನಲ್ಲ!

ಮೃಡಾನಿಯು ಪರಿವ್ರಾಜಕಳಾಗಿ ಅನೇಕ ವರ್ಷಗಳನ್ನು ಕಳೆದಳು. ಉಪವಾಸ, ಮೌನ, ಧ್ಯಾನ, ವೇದಾಧ್ಯಯನ—ಹೀಗೆ ಕಠೋರ ತಪಸ್ಸನ್ನೇ ಆಚರಿಸಿದಳು. ಬಿಸಿಲು, ಚಳಿ, ಹಸಿವುಗಳನ್ನು ಲೆಕ್ಕಿಸದೆ ಅನೇಕ ಬಾರಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಅಖಂಡ ಮಂತ್ರಜಪವನ್ನು ಮಾಡಿದಳು.

ಹಿಮಾಲಯ ಯಾತ್ರೆಯನ್ನು ಮುಗಿಸಿ ದ್ವಾರಕೆ, ಬೃಂದಾವನ, ಭುವನೇಶ್ವರ, ಪುರಿ ತೀರ್ಥದರ್ಶನವನ್ನೂ ಮಾಡಿಕೊಂಡು ಕಲ್ಕತ್ತೆಗೆ ಹಿಂದಿರುಗಿದ ಈ ಸಾಧ್ವಿಯು ನವಯುಗದ ಅವತಾರ ಪುರುಷನಾದ ಶ್ರೀರಾಮಕೃಷ್ಣ ಪರಮಹಂಸರ ಆಶ್ರಯವನ್ನು ಪಡೆದಳು. ಶ್ರೀರಾಮಕೃಷ್ಣರ ರಸದ್ದಾರ (ಭೌತಿಕ ಅವಶ್ಯಕತೆಗಳನ್ನು ನೋಡಿಕೊಳ್ಳುವವರು) ರೆಂದು ಹೆಸರುವಾಸಿಯಾಗಿದ್ದ ಬಲರಾಮ ಬಸು ಅವಳಿಗೆ ಅವರ ವಿಚಾರವನ್ನೆಲ್ಲ ಹೇಳಿ ಅವರನ್ನು ಭೇಟಿಯಾಗಬೇಕೆಂದು ಕೋರಿದಾಗ ನಿರ್ದಾಕ್ಷಿಣ್ಯವಾಗಿ ಉತ್ತರಿಸಿದಳು: "ಜೀವನದಲ್ಲಿ ಅನೇಕ ಸಾಧುಗಳನ್ನು ನಾನು ನೋಡಿದ್ದೇನೆ, ಮತ್ತೊಬ್ಬ ಸಾಧುವನ್ನು ನೋಡಬೇಕೆಂಬ ಆಸೆ ನನಗಿಲ್ಲ. ನಿಮ್ಮ ಸಾಧುಗಳಲ್ಲಿ ನಿಜವಾದ ಶಕ್ತಿಯೇನಾದರೂ ಇದ್ದರೆ, ಅವರೇ ನನ್ನನ್ನು ತಮ್ಮ ಬಳಿಗೆ ಸೆಳೆದುಕೊಳ್ಳಲಿ." ಶ್ರೀರಾಮಕೃಷ್ಣರು ಅವಳನ್ನು ಆಕರ್ಷಿಸಿದ ಬಗೆಯೂ ಅದ್ಭುತವೇ ಸರಿ. ಪ್ರಥಮಬಾರಿ ಅವರ ದರ್ಶನವನ್ನು ಪಡೆದಾಗ "ತಂದೆ, ನೀವು ಇಷ್ಟೊಂದು ಸಮೀಪದಲ್ಲಿಯೇ ಅಡಗಿರುವಿರೆಂದು ನನಗೆ ಮೊದಲೇ ತಿಳಿದಿದ್ದರೆ!" ಎಂದು ಉದ್ಗರಿಸಿದಾಗ ಶ್ರೀರಾಮಕೃಷ್ಣರು ಮುಗುಳ್ನಗುತ್ತ ನೀಡಿದ ಉತ್ತರ, "ಆಗ ನೀನು ಇಷ್ಟೊಂದು ತಪಸ್ಸು ಮಾಡುತ್ತಿದ್ದೆಯೇನು?" ಶ್ರೀರಾಮಕೃಷ್ಣರಿಗೆ ಆಕೆ ಬೃಂದಾವನದ ಗೋಪಿ ಎಂಬ ದರ್ಶನವೂ ಆಯಿತು. ಶ್ರೀಮಾತೆ ಶಾರದಾದೇವಿಯವರೂ ಈ ಅಸಾಮಾನ್ಯ ಸಾಧ್ವಿಯನ್ನು ಸ್ನೇಹದಿಂದ ಕಾಣುತ್ತಿದ್ದು, ಇಬ್ಬರೂ ಅವಳನ್ನು "ಗೌರ್-ದಾಸಿ" ಎಂದು ಕರೆಯುತ್ತಿದ್ದರು. ಇತರರು "ಗೌರಿ-ಮಾ" ಎಂದು ಕರೆದರು. ಗೌರಿಮಾ ಅದೆಷ್ಟು ಪರಿಶುದ್ಧಳೆಂದರೆ ಅವಳು ಶ್ರೀರಾಮಕೃಷ್ಣರಿಗೆ ಅಡುಗೆಯನ್ನೂ ಮಾಡುತ್ತಿದ್ದಳು. ಅವಳ ಸುಮಧುರ ಕಂಠದಿಂದ ಹೊರಹೊಮ್ಮುತ್ತಿದ್ದ ಭಕ್ತಿ ಸಂಗೀತವನ್ನಾಲಿಸಿದಾಗ ಶ್ರೀರಾಮಕೃಷ್ಣರಿಗೆ ಅದೆಂಥ ಆನಂದ!

ಆಧ್ಯಾತ್ಮಿಕ ಸಾಧನೆಯ ಒಟ್ಟೊಟ್ಟಿಗೆ ಜನಹಿತವನ್ನೂ ಸಾಧಿಸಬೇಕೆಂಬುದು ನೂತನ ವಿಶ್ವಕ್ಕೆ ಶ್ರೀರಾಮಕೃಷ್ಣರ ವಿಶೇಷ ಕೊಡುಗೆ. ಗೌರಿಮಾಳ ಉನ್ನತ ಜೀವನವನ್ನು ಗ್ರಹಿಸಿದ್ದ ಅವರು ಅವಳನ್ನು ಜನಸೇವಾ ಕಾರ್ಯದಲ್ಲಿಯೂ ತೊಡಗಿಸಿದರು. ಇದಕ್ಕೆ ಸಂಬಂಧಿಸಿದ ಘಟನೆಯು ನಿಜಕ್ಕೂ ಸ್ವಾರಸ್ಯಕರ. ಒಂದು ದಿನ ಗೌರಿಮಾ ಪೂಜೆಗೆಂದು ಹೂಕೊಯ್ಯುತ್ತಿದ್ದಾಳೆ. ಶ್ರೀರಾಮಕೃಷ್ಣರು ಕೊಡವೊಂದರಲ್ಲಿ ನೀರನ್ನು ಹೊತ್ತುಕೊಂಡು ಅವಳಿದ್ದಲ್ಲಿಗೆ ಬಂದರು. ಅವರ ಒಂದು ಕೈಯಲ್ಲಿ ಬಕುಲದ ರೆಂಬೆಯಿದೆ. ಮತ್ತೊಂದು ಕೈಯಿಂದ ನೀರು ಸಿಂಚನ ಮಾಡುತ್ತ ಹೇಳಿದರು, "ಗೌರಿ, ನಾನು ನೀರನ್ನು ಹೊಯ್ಯುವೆ, ನೀನು, ಮಣ್ಣನ್ನು ಹದಮಾಡು," ಎಂದು. ಮಾತಿನ ಮರ್ಮವನ್ನರಿಯದ ಗೌರಿಮಾ, "ಇಲ್ಲಿನ ಮಣ್ಣು ಚೆನ್ನಾಗಿಲ್ಲ. ಬರಿಯ ಕಲ್ಲುಗಳಿವೆ" ಎಂದಾಗ ಶ್ರೀರಾಮಕೃಷ್ಣರು, "ಅಯ್ಯೋ, ನಾನು ಹೇಳಿದ್ದೇ ಒಂದು, ನೀನು ಅರ್ಥ ಮಾಡಿಕೊಂಡಿದ್ದೇ ಒಂದು! ನಮ್ಮ ದೇಶದ ಮಹಿಳೆಯರು ಎಷ್ಟೊಂದು ಕಷ್ಟವನ್ನನುಭವಿಸುತ್ತಾರೆ. ಅವರ ಒಳಿತಿಗಾಗಿ ನೀನೇನಾದರೂ ಮಾಡಬೇಕು" ಎಂದು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಆದರೆ ಸಂನ್ಯಾಸಿನಿಯಂತೆ ವೈರಾಗ್ಯ ಜೀವನವನ್ನು ನಡೆಸುತ್ತಿದ್ದ ಗೌರಿಮಾಳಿಗೆ ಈ ಮಾತು ಹೇಗೆ ತಾನೆ ಹಿಡಿಸೀತು? "ಪ್ರಾಪಂಚಿಕರೊಡನೆ ಇರುವುದು ನನ್ನಿಂದ ಸಾಧ್ಯವಿಲ್ಲ. ಈ ಸದ್ದು-ಗದ್ದಲಗಳು ನನಗೆ ಚೂರೂ ಹಿಡಿಸದು. ನಾನು ಬೇಕಾದರೆ ಕೆಲವು ಹುಡುಗಿಯರನ್ನು ಹಿಮಾಲಯಕ್ಕೆ ಕರೆದುಕೊಂಡು ಹೋಗಿ ಅವರ ವ್ಯಕ್ತಿತ್ವವನ್ನು ರೂಪಿಸುವೆ" ಎಂದಳು. ಅವಳು ಹಾಗೆಂದ ಮಾತ್ರಕ್ಕೆ ಶ್ರೀರಾಮಕೃಷ್ಣರು ಬಿಟ್ಟಾರೇನು? "ಇಲ್ಲ, ಅದು ಖಂಡಿತಾ ಸಾಧ್ಯವಿಲ್ಲ. ಪಟ್ಟಣದಲ್ಲಿಯೇ ನೀನು ಈ ಕಾರ್ಯವನ್ನು ಕೈಗೊಳ್ಳಬೇಕು. ಬೇಕಾದಷ್ಟು ಆಧ್ಯಾತ್ಮಿಕ ಸಾಧನೆಯನ್ನು ನೀನಾಗಲೇ ಮಾಡಿರುವೆ. ಅದರ ಶಕ್ತಿಯಿಂದ ಈಗ ಮಹಿಳೆಯರ ಸೇವೆಯನ್ನು ಮಾಡು" ಎಂದರು. ಶ್ರೀರಾಮಕೃಷ್ಣರ ಮತವನ್ನು ಮೊದಲಿಗೆ ಗೌರಿ-ಮಾ ಇಷ್ಟಪಡದಿದ್ದರೂ ಅವರು ಹೇಳಿದ ಕಾರ್ಯವನ್ನು ನಿರ್ವಹಿಸದೆ ಬೇರೆ ಉಪಾಯವೇ ಇಲ್ಲ. ಸತತ ಇಪ್ಪತ್ತು ವರ್ಷಗಳು ದೇಶಾದ್ಯಂತ ತಿರುಗಾಡಿದ್ದ ಅವಳಿಗೆ ಜನಜೀವನ, ಅದರಲ್ಲೂ ಮಹಿಳೆಯರ ಬಗ್ಗೆ ಸಾಕಷ್ಟು ತಿಳಿದಿತ್ತು. ೧೮೯೪ರಲ್ಲಿ ಸ್ವಯಂ ಪ್ರೇರಣೆಯಿಂದ, ಕಲ್ಕತ್ತೆಗೆ ೧೪ ಮೈಲುಗಳ ದೂರದಲ್ಲಿನ, ಬಾರಾಕ್‌ಪುರದಲ್ಲಿ ಶ್ರೀ ಶಾರದೇಶ್ವರೀ ಆಶ್ರಮವನ್ನು ಸ್ಥಾಪಿಸಿದಳು. ಗಂಗಾತೀರದ ಈ ಪ್ರಶಾಂತ ತಾಣದಲ್ಲಿ ೨೫ ಮಂದಿ ಸದಸ್ಯೆಯರಿಗೆ ಗೌರಿಮಾ ತರಬೇತು ನೀಡಿದಳು; ಆ ಆದರ್ಶ ಶಿಕ್ಷಣದಲ್ಲಿ ಆಧ್ಯಾತ್ಮಿಕತೆಗೆ ಯೋಗ್ಯಸ್ಥಾನವಿತ್ತು. ಶಾಲಾ ಕಟ್ಟಡದ ನಿರ್ಮಾಣವಾಗುವವರೆಗೆ ಮರದಡಿಯಲ್ಲಿ ಅಥವಾ ಹುಲ್ಲು ಛಾವಣಿಯ ಗುಡಿಸಿಲಿನಲ್ಲಿ ತರಗತಿಗಳನ್ನು ನಡೆಸಿದಳು. ಒಮ್ಮೆ ಈ ಆಶ್ರಮಕ್ಕೆ ಭೇಟಿಯಿತ್ತ ಶ್ರೀಮಾತೆ ಶಾರದಾದೇವಿಯವರು ಗೌರಿಮಾಳ ನಿಃಸ್ವಾರ್ಥ ಕಾರ್ಯವನ್ನು ಮನತುಂಬ ಪ್ರಶಂಸಿಸಿ ಹರಸಿದರು.

ಮಹಿಳೆಯರು ಅಬಲೆಯರು, ಪುರುಷರಿಗಿಂತ ಅಧಮರು ಎಂಬ ಅಭಿಪ್ರಾಯವಿದ್ದ ಆಗಿನ ಸಮಾಜದಲ್ಲಿ ತನ್ನ ಆಧ್ಯಾತ್ಮಿಕ ಶಕ್ತಿ, ಧೈರ್ಯ, ದಿಟ್ಟತನ, ಪ್ರೀತಿ, ಸಹಾನುಭೂತಿ ಹಾಗು ಕಾರ್ಯದಕ್ಷತೆಗಳಿಂದ "ಸೈ" ಎನಿಸಿಕೊಂಡಳು ಗೌರಿಮಾ. ೧೮೯೪ರಲ್ಲಿ ಸ್ವಾಮಿ ವಿವೇಕಾನಂದರು ಅಮೆರಿಕೆಯಿಂದ ತಮ್ಮ ಗುರುಭಾಯಿಗಳಿಗೆ ಬರೆದ ಪತ್ರದಿಂದ ಅವರಿಗೆ ಆಕೆಯ ಮೇಲಿದ್ದ ಗೌರವ ಹಾಗು ಅಭಿಮಾನದ ಪರಿಚಯ ನಮಗಾಗುತ್ತದೆ. "... ನೀವು ಸ್ವಲ್ಪವಾದರೂ

ಒಳಿತು ಸಾಧಿಸಬೇಕೆಂದಿದ್ದರೆ ಜೀವಸೇವೆಯನ್ನು ಮಾಡಿರಿ. ಹಳ್ಳಿಯಿಂದ ಹಳ್ಳಿಗೆ, ಮನೆಯಿಂದ ಮನೆಗೆ ಹೋಗಿ ಉದಾತ್ತ ಚಿಂತನೆಗಳನ್ನು ಹರಡಿ. ಆಗ ಮಾತ್ರವೇ ಏನನ್ನಾದರೂ ಸಾಧಿಸಲಾಗುವುದು... ಗೌರಿ ಮಾ ಎಲ್ಲಿದ್ದಾರೆ? ಆಕೆಯಂತೆ ಆತ್ಮಶ್ರದ್ಧೆಯುಳ್ಳ ಸಾವಿರ ಮಾತೆಯರು ನಮಗೀಗ ಬೇಕಾಗಿದ್ದಾರೆ...." ೧೯೧೧ರಲ್ಲಿ ಶ್ರೀ ಶಾರದೇಶ್ವರೀ ಆಶ್ರಮವು ಉತ್ತರ ಕಲ್ಕತ್ತೆಗೆ ಸ್ಥಳಾಂತರಗೊಂಡಾಗ ಅದರಲ್ಲಿ ಐವತ್ತು ಸ್ವಯಂ ಸೇವಕಿಯರೂ ಮುನ್ನೂರು ವಿದ್ಯಾರ್ಥಿನಿಯರೂ ಇದ್ದರು. ಸಮಾಜದ ಅಭಿವೃದ್ಧಿಗೆ ಮಹಿಳಾ ಶಿಕ್ಷಣವು ಅನಿವಾರ್ಯವೆಂದು ಮನಗಂಡಿದ್ದ ಗೌರಿಮಾಳಿಗೆ ದಾನಿಗಳಿಂದ ಆರ್ಥಿಕ ನೆರವು ಹಾಗೂ ಸದ್ಗುಣ ಸಂಪನ್ನ ವ್ಯಕ್ತಿಗಳಿಂದ ಪ್ರೋತ್ಸಾಹವೂ ದೊರಕಿತು. ಸರ್ವತ್ಯಾಗಿಯಾದ ತನ್ನಲ್ಲಿ ಕಿಂಚಿತ್ತೂ ಧನವಿಲ್ಲದಿದ್ದರೂ ಈಶ್ವರ ನಿರ್ಭರತೆ, ನಿಃಸ್ವಾರ್ಥತೆ, ಹಾಗೂ ಆತ್ಮಶ್ರದ್ಧೆಗಳಿಂದ ಇತರರ ಉನ್ನತಿಯನ್ನೂ ಸಾಧಿಸಿದಳು ಗೌರಿಮಾ. ಮಹಾತ್ಮಾ ಗಾಂಧೀಜಿ ಹಾಗೂ ಚಿತ್ತರಂಜನ್ ದಾಸ್ ಆಕೆಯನ್ನು ಭೇಟಿಯಾಗಿದ್ದಾಗ "ನಿಷ್ಕಾಮ ಕರ್ಮ"ದ ಬಗ್ಗೆ ಆಕೆಯಾಡಿದ ಮಾತುಗಳಿಂದ ಅವರು ಪ್ರಭಾವಿತರಾಗಿದ್ದರು.

ಗೌರಿಮಾಳ ಧೈರ್ಯ, ಸಾಹಸಗಳು ಎಂಥವರನ್ನೂ ಬೆರಗುಗೊಳಿಸುತ್ತಿದ್ದವು ಎಂಬುದಕ್ಕೆ ಅನೇಕ ದೃಷ್ಟಾಂತಗಳಿವೆ. ಒಮ್ಮೆ ಆಕೆ ಗಯಾದಲ್ಲಿದ್ದಾಗ, ಅಲ್ಲಿನ ಮಹಿಳಾ ಯಾತ್ರಿಗಳನ್ನು ಕೆಲವು ಠಕ್ಕ ಪಂಡಾಗಳು ಹಣಕ್ಕಾಗಿ ಪೀಡಿಸುತ್ತಿದ್ದುದು ಆಕೆಯ ಗಮನಕ್ಕೆ ಬಂತು. ಇದರ ವಿಚಾರವಾಗಿ ಆ ಪಂಡಾಗಳೊಂದಿಗೆ ತಾನು ಸಮಾಲೋಚನೆ ನಡೆಸಿ ಸಮಸ್ಯೆಯನ್ನು ಬಗೆಹರಿಸುವ ಆಶ್ವಾಸನೆಯನ್ನು ಆ ಯಾತ್ರಿಕರಿಗೆ ನೀಡಿದಳು. ಆದರೆ ಆ ಮಹಿಳೆಯರಿಗೆ ದುಷ್ಟ ಪಂಡಾಗಳೆಂದರೆ ಎಲ್ಲಿಲ್ಲದ ಭಯ. ಅವರೆಂದರು: "ಅಮ್ಮಾ, ನೀವಾದರೋ ನಮ್ಮಂತೆಯೇ ಒಬ್ಬ ಸಾಮಾನ್ಯ ಹೆಂಗಸು. ಆ ಪಂಡಾಗಳು ನಿಮಗೇ ತೊಂದರೆ ಕೊಟ್ಟರೆ ನೀವು ನಮ್ಮನ್ನು ಹೇಗೆ ತಾನೆ ಕಾಪಾಡುವಿರಿ?" ಗೌರಿಮಾ ನಗುತ್ತ, "ನನ್ನನ್ನವರು ಕಾಡುವರೇ? ನನ್ನ ಬಗ್ಗೆ ನೀವೇನೂ ಚಿಂತಿಸಬೇಡಿ. ನನ್ನೊಡನಿರುವ ಭಗವಂತನು ನಿಮ್ಮನ್ನು ಕಾಪಾಡುವನು" ಎಂದು ಭರವಸೆ ನೀಡುತ್ತ ಅಲ್ಲಿಂದ ಹೊರಟು ಹೋದಳು. ಬಹುಶಃ ಹಣ ತರಲು ಹೋಗಿರಬಹುದು ಎಂದುಕೊಳ್ಳುತ್ತಿರುವಾಗಲೇ ಗೌರಿಮಾ ಮತ್ತೆ ಹಾಜರು—ಜತೆಯಲ್ಲಿ ತನಗೆ ಪರಿಚಿತನಾಗಿದ್ದ ಪೋಲಿಸ್ ಅಧಿಕಾರಿ! ಮಹಿಳಾ ಯಾತ್ರಿಗಳು ಇನ್ನು ಯಾವ ತೊಂದರೆಯೂ ಇಲ್ಲದೆ ಭಗವದ್ದರ್ಶನವನ್ನು ಮಾಡಿಕೊಂಡು ಆನಂದದಿಂದ ಹಿಂದಿರುಗಿದರು. ಕಷ್ಟ ಸಂದರ್ಭಗಳಲ್ಲಿ ಧೈರ್ಯದ ಒಟ್ಟಿಗೆ ಯುಕ್ತಿಯನ್ನೂ ಉಪಯೋಗಿಸಿ ತಮಗೊದಗಿ ಬಂದ ಸಮಸ್ಯೆಗಳನ್ನು ಎದುರಿಸಬಲ್ಲ ಮಹಿಳೆಯರು ನಮ್ಮ ದೇಶದಲ್ಲಿ ಈಗಲೂ ಕಡಿಮೆಯೇ. ಆದ್ದರಿಂದಲೇ ಗೌರಿಮಾಳಂತಹ ಆದರ್ಶ ನಮಗೀಗ ಅಗತ್ಯ.

ತನ್ನಂತೆಯೇ ಇತರ ಮಹಿಳೆಯರೂ ಧೈರ್ಯದಿಂದಿರಬೇಕೆಂಬುದೇ ಗೌರಿಮಾಳ ಆಸೆ. ಇದಕ್ಕೆ ನಿದರ್ಶನವಾಗಿ ಇನ್ನೊಂದು ಘಟನೆ. ಒಂದು ದಿನ ಉದ್ದನೆಯ ಪೋಷಾಕನ್ನು ಧರಿಸಿ, ತಲೆಗೆ ರುಮಾಲು ಸುತ್ತಿಕೊಂಡು ಕೈಯಲ್ಲಿ ದಂಡವನ್ನು ಹಿಡಿದ ವ್ಯಕ್ತಿಯೊಬ್ಬನು ಮನೆಯಲ್ಲಿ ಗಂಡಸರಿಲ್ಲದ ಸಮಯವನ್ನು ಸಾಧಿಸಿ ಒಳಗಡೆ ಪ್ರವೇಶಿಸಿದ. ಅಪರಿಚಿತನೊಬ್ಬನ ಆಗಮನದಿಂದ ಮನೆಯೊಳಗಿದ್ದ ಸ್ತ್ರೀಯರು ಕಂಗಾಲಾಗಿ ಕಿರುಚಿಕೊಳ್ಳಲಾರಂಭಿಸಿದರು. ಕೂಡಲೆ, ಗೌರಿಮಾ ತನ್ನ ನಕಲು ವೇಷವನ್ನು ಸರಿಸಿ, "ಇದೇನಿದು? ಗಂಡಸರನ್ನು ಕಂಡರೆ ಇಷ್ಟೊಂದು ಭಯವೇ? ಅಪರಿಚಿತನೊಬ್ಬನು ಮನೆಯೊಳಗೆ ಪ್ರವೇಶಿಸಿದಾಗ ಕೈಲಿದ್ದ ಸಾಮಾನನ್ನು ಅವನತ್ತ ಬಿಸಾಡದೆ ಬಡಪಾಯಿಗಳಂತೆ ಹೀಗೆ ಕಿರುಚಿಕೊಳ್ಳುವುದು ತರವೇ? ನೀವು ಮೂವರು ಹೆಂಗಸರಿದ್ದೀರಿ; ಮೂವರೂ ಸೇರಿಕೊಂಡು ಒಬ್ಬ ಗಂಡಸನ್ನು ಹೊರದಬ್ಬಲು ನಿಮ್ಮಿಂದ ಸಾಧ್ಯವಾಗಲಿಲ್ಲವೇ? ಮಹಿಳೆಯರು ಬರಿಯ ಸದ್ಗೃಹಿಣಿಯರಾಗಿದ್ದರೆ ಸಾಲದು, ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಾಮರ್ಥ್ಯವಿರಬೇಕು," ಎಂದು ಬುದ್ಧಿ ಹೇಳಿದಳು. ಗೌರಿಮಾಳ ಈ ಸಂದೇಶ ಅಂದಿನ ಹೆಂಗಸರಿಗೆ ಮಾತ್ರ ಅನ್ವಯವಲ್ಲ. ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಸಹ ಎಲ್ಲರೂ ನೂರಕ್ಕೆ ನೂರು ಪಾಲು ಒಪ್ಪುವಂಥದ್ದು.

ಒಂದು ಸಲ ಶ್ರೀಮಾತೆಯವರು ಗೌರಿಮಾಳ ಬಗ್ಗೆ ಹೀಗೆಂದಿದ್ದರು: "ಗೌರ್‌ದಾಸಿ ತನ್ನ ಆಶ್ರಮದ ಹುಡುಗಿಯರನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಅನಾರೋಗ್ಯದಿಂದ ಬಳಲುತ್ತಿರುವ ಬಾಲಕಿಯರ ಶುಶ್ರೂಷೆಯನ್ನು ತಾನೇ ಮಾಡುತ್ತಾಳೆ. ಇದ್ಯಾವುದರ ಅಗತ್ಯವೂ ಅವಳಿಗಿಲ್ಲದಿದ್ದರೂ ಶ್ರೀರಾಮಕೃಷ್ಣರು ಅವಳಿಂದ ಈ ಕಾರ್ಯಗಳನ್ನು ಮಾಡಿಸುತ್ತಿದ್ದಾರೆ."

೧೯೧೭ರಲ್ಲಿ ಗೌರಿಮಾ ಬೇಲೂರು ಮಠಕ್ಕೆ ಬಂದಿದ್ದಾಗ ಸಂನ್ಯಾಸಿಯೊಬ್ಬರು ಪ್ರಶ್ನಿಸಿದರು: "ನೀವು ಮನೆ ಬಿಟ್ಟಾಗ ನಿಮಗಿನ್ನೂ ಚಿಕ್ಕ ವಯಸ್ಸು. ಬಳಿಯಲ್ಲಿ ಹಣವೂ ಇರಲಿಲ್ಲ. ಒಬ್ಬಂಟಿಗರಾಗಿ ಯಾತ್ರೆ ಮಾಡಲು ನಿಮಗೆ ಭಯವಾಗುತ್ತಿರಲಿಲ್ಲವೆ?" ಗೌರಿಮಾಳ ಉತ್ತರ ಸ್ಪಷ್ಟವಾಗಿತ್ತು : "ಮಗು, ಎಲ್ಲ ರೀತಿಯ ಭಯವೂ ಶರೀರಕ್ಕೆ ಸಂಬಂಧಿಸಿದುದು. ಯಾರೂ ಕೂಡ ನನಗೆ ಯಾವ ಕೇಡನ್ನೂ ಬಗೆಯದಂತಹ ಶಕ್ತಿಯೊಂದು ನನ್ನಲ್ಲಿತ್ತು."

"ಆಶ್ರಮದ ದಾಸಿ" ಎಂಬ ಭಾವದಿಂದ ಹೆಣ್ಣು ಮಕ್ಕಳ ಸೇವೆಯನ್ನು ಮಾಡುತ್ತಿದ್ದ ಗೌರಿಮಾಳ ಶಕ್ತಿಯಿದ್ದುದು ದೈವಭಕ್ತಿ, ಶುದ್ಧ ಮನಸ್ಸು, ಆತ್ಮ ಸಮರ್ಪಣೆ ಹಾಗೂ ಆಡಂಬರರಹಿತ ಜೀವನದಲ್ಲಿ. ತನ್ನ ವಿದ್ಯಾರ್ಥಿನಿಯರ ಮನದಾಳದಲ್ಲಿ ಅಚ್ಚೊತ್ತಿದ್ದ ಆಕೆಯ ಮಾತುಗಳೆಂದರೆ, "ವಸ್ತ್ರಾಭರಣ ಮತ್ತು ಕಾಂತಿವರ್ಧಕ ವಸ್ತುಗಳಿಂದ ಮಹಿಳೆಯರ ಸೌಂದರ್ಯ ಹೆಚ್ಚುವುದಿಲ್ಲ. ದೈಹಿಕ ಹಾಗೂ ಮಾನಸಿಕ ಶುದ್ಧಿಯೇ ನಿಜವಾದ ಸೌಂದರ್ಯ ಸಾಧನಗಳೆಂದು ಯಾವಾಗಲೂ ನೆನಪಿನಲ್ಲಿಡಿ." ಗೌರಿಮಾ ಸ್ಥಾಪಿತ ಶ್ರೀ ಶಾರದೇಶ್ವರೀ ಆಶ್ರಮವು ಇಂದಿಗೂ ತನ್ನ ಆದರ್ಶಾನುಸಾರ ಮಹಿಳಾ ಉದ್ಧಾರ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ.